ಗುರುತು ಹಾಕುತ್ತಾರೆ. ಕಪ್ಪುದಾರದ ಎರಡು ತುದಿಯನ್ನು ಹಿಡಿದೆಳೆದು ಮಧ್ಯ ಭಾಗವನ್ನು ಮೇಲಕ್ಕೆಳೆದು ಟಪ್ಪೆಂದು ಬಿಡುತ್ತಾರೆ. ಹಣೆಬರಹದಂತೆ ಅದರ ಗುರುತು ಬೀಳುತ್ತದೆ. ಕಪ್ಪುದಾರದ ಗುರುತಿಗನುಸಾರವಾಗಿ ಗರಗಸ ಕೆಲಸ ಮಾಡುತ್ತದೆ.

ಒಂದು ಅಂಚನ್ನು ಸ್ವಲ್ಪ ಮೇಲಕ್ಕೆತ್ತಿ ನಿಲ್ಲುವಂತೆ, ಹಳೆಯ ಮಾಸಲುಬಿಳಿಯ ಟವೆಲನ್ನು ತಲೆಗೆ ಸುತ್ತಿ, ತೋಳಿಲ್ಲದ ಶರ್ಟು ಮತ್ತು ಸೊಂಟಕ್ಕೆ ತುಂಡು ಪಂಚೆಯನ್ನು ಸುತ್ತಿ ಅಪ್ಪ ರಾಜ್ಯದ ಸೇನಾಧಿಪತಿಯಂತೆ ಮರದ ದಿಮ್ಮಿಯ ಮೇಲೆ ನಿಂತು ಗರಗಸವನ್ನು ಎಳೆಯುತ್ತಾರೆ. ಬೀಟೆ, ತೇಗ, ಹಲಸು ಮರಗಳ ಪುಡಿಯಿಂದ ಬಣ್ಣ ಮಾಸಿದ ತೋಳಿರುವ ಬನಿಯನ್ ಮತ್ತು ಶಿರ್ಡಿ ಬಾಬಾನಂತೆ ತಲೆಗೆ ರುಮಾಲು ಸುತ್ತಿ ಅಚ್ಚುಮಾಮ ಕೆಳಗೆ ನಿಂತು ಗರಗಸವನ್ನು ತಳ್ಳುವುದು, ಎಳೆಯುವುದು ಮಾಡುತ್ತಾರೆ. ಹರಸಿನದ ಪುಡಿ, ಕಪ್ಪು ಪುಡಿಗಳಿಂದ ಅಚ್ಚುಮ್ಮಾಮನ ಮುಖ ಮರೆಯಾಗುತ್ತದೆ.

ಉಬ್ಬಸದ ಉಪದ್ರವಿದ್ದುದರಿಂದ ಅಚ್ಚುಮ್ಮಾಮ ಆ ಕೆಲಸವನ್ನು ಬಿಟ್ಟರು. ಅದರ ನಂತರ ಚಹದಂಗಡಿಯಲ್ಲಿ ಚಹ ತಯಾರಿಸುವ ಕೆಲಸ. ಪಾಟ್ಟಾದಿಂದ ಮಳೆ ಬಿಲ್ಲಿನಂತೆ ಗೆರೆಗಳಿರುವ (ಪಾಟ್ಟಾ ಚಹ ಆರಿಸಲು ಬಳಸುವ ಲೋಹದ ಪಾತ್ರೆ) ಗಾಜಿನ ಲೋಟಾಗಳಿಗೆ ಚಹ ಸುರಿಯುವ ಅದ್ಭುತ ವಿದ್ಯೆ ಕಲಿಯುತ್ತಿದ್ದಂತೆ ಆ ಕೆಲಸವನ್ನೂ ಬಿಟ್ಟರು. ಅದರ ನಂತರ ಎತ್ತಿನ ಗಾಡಿಯನ್ನು ಓಡಿಸತೊಡಗಿದರು. ಶಿರವೆತ್ತಿ ನೆಟ್ಟಗೆ ನಿಂತಿರುವ ಚೂಪಾದ ಕೊಂಬುಗಳಿರುವ ಎರಡು ಬಿಳಿ ಎತ್ತುಗಳನ್ನು ಕಟ್ಟಿ ಗಾಡಿಯೋಡಿಸುತ್ತಾ ಅಚ್ಚುಮ್ಮಾಮ ಬರುತ್ತಿದ್ದರೆ ಅವರ ಲೆವಲೇ ಬೇರೆಯಾಗಿರುತ್ತಿತ್ತು.

ಅಪರೂಪಕ್ಕೊಮ್ಮೆ ಪೇಟೆಯಿಂದ ಡಾಕ್ಟರರನ್ನು ಕರೆತರಲು ಒಂದು ಜೀಪಿರುತ್ತಿತ್ತು. ಅದನ್ನು ಬಿಟ್ಟರೆ, ಹಳ್ಳಿ ಹಾದಿಯಲ್ಲಿ ಬರುವ ಏಕೈಕ ವಾಹನ ಅಚ್ಚುಮ್ಮಾಮನ ಎತ್ತಿನಗಾಡಿ. ಅಚ್ಚುಮ್ಮಾಮ ಪೇಟೆಯಿಂದ ಬರುವಾಗ ಗಾಡಿಯಲ್ಲಿ ಸರಕುಗಳೇನೂ ಇರುತ್ತಿರಲಿಲ್ಲ. ಹೆಚ್ಚೆಂದರೆ ಕಣ್ಣನ್ ಅಣ್ಣನ ಅಂಗಡಿಗೆ ಒಂದು ಕವಳಿಗೆ ವೀಳ್ಯೆದೆಲೆ, ಒಂದು ಕಟ್ಟು ಹೊಗೆಸೊಪ್ಪು, ಸೂಟೆಯಂತಿರುವ ನಾಲ್ಕೈದು ಬೆಲ್ಲದ ಕಟ್ಟುಗಳು ಇರುತ್ತಿದ್ದವು.

ಅಚ್ಚುಮ್ಮಾಮನ ಎತ್ತುಗಳಿಗೆ ನಾನು ಚಿರಪರಿಚಿತ. ಶಾಲಾ ಪುಸ್ತಕಗಳನ್ನು ಎದೆಗಾನಿಸಿ ಹಿಡಿದು ದಾರಿಯಲ್ಲಿ ಹೋಗುತ್ತಿದ್ದರೆ, ನನ್ನನ್ನು ಕಂಡ ಕೂಡಲೇ ಎತ್ತುಗಳ ಗೊರಸುಗಳ ಸಪ್ಪಳ ನಿಧಾನವಾಗುತ್ತದೆ. ನಾನು ಗಾಡಿಯೊಳಕ್ಕೆ ಜಿಗಿದು ಕುಳಿತುಕೊಳ್ಳುತ್ತೇನೆ. ಎತ್ತುಗಳು ಕೂಡಲೇ ಮನೆಯತ್ತ ಓಡತೊಡಗುತ್ತವೆ. ನನಗೆ ಎಲ್ಲೂ ಹೋಗಲಿಕ್ಕಿಲ್ಲದಿದ್ದರೂ, ಕೆಲವೊಮ್ಮೆ ನಾನು ಗಾಡಿ ಕಟ್ಟಿ ಪ್ರಯಾಣಿಸುತ್ತಿದ್ದೆ. ಆ ಪ್ರಯಾಣ ನನಗೊಂದು ಹೆಮ್ಮೆಯನ್ನು ನೀಡುತ್ತಿತ್ತು. ನನ್ನ ಸಮ ವಯಸ್ಸಿನವರು ಆಶೆಬುರುಕರಂತೆ ನೋಡುತ್ತಿದ್ದರೆ ಅವರನ್ನು ನೋಡಿ ನಗುತ್ತಾ ತೆರೆದ ಬಂಡಿಯಲ್ಲಿ ನನ್ನ ಪ್ರಯಾಣ ಮುಂದುವರಿಯುತ್ತದೆ.

ಹತ್ತಡಿ ಸಂಕದವರೆಗೆ ಮಾತ್ರ ಆ ಪ್ರಯಾಣ. ನನಗೆ ಮೊದಲೇ ಸಂಕವೆಂದರೆ ಭಯ. ನೀರನ್ನು ಕಂಡರೂ ಭಯಾನೇ. ತೋಡಿಗೆ ಎಂಟಡಿಯಷ್ಟೆ ಅಗಲ. ತೆಂಗಿನ ಮರಗಳನ್ನು ಕಡಿದು ಅವುಗಳನ್ನು ಹತ್ತಡಿಗೆ ಸರಿಯಾಗಿ ಕತ್ತರಿಸಿ ತೋಡಿಗೆ ಅಡ್ಡಲಾಗಿಟ್ಟು ಸಂಕವನ್ನಾಗಿ ಮಾಡಿದ್ದಾರೆ. ಮರಗಳ ನಡುವಿನ ಬಿರುಕುಗಳಿಗೆ ಪುಡಿಗಲ್ಲು ಮತ್ತು ಮಣ್ಣನ್ನು ಹಾಕಿ ಗಾಡಿಗಳು ಓಡಾಡುವಂತೆ ಮಾಡಲಾಗಿದೆ. ನನಗೆ ಆ ಸಂಕ ಕಂಡರೂ ಭಯವೇ. ತೆಂಗಿನ ಕಾಂಡಗಳೇನಾದರೂ ಮುರಿದು ಬಿದ್ದರೆ...?

ಅದಕ್ಕೆ ನಾನು ಸಂಕ ತಲುಪುವ ಮೊದಲೇ ಇಳಿದುಬಿಡುತ್ತಿದ್ದೆ. ಅಚ್ಚುಮ್ಮಾಮನಿಗೂ ಎತ್ತುಗಳಿಗೂ ಅದು ತಿಳಿದಿತ್ತು. ಅವರು ನನ್ನನ್ನು ಇಳಿಸಿ ಮುಂದೆ ಹೋಗುತ್ತಾರೆ. ಗದ್ದೆಯ ಮಧ್ಯೆ ಹರಿಯುವ ತೋಡಿನ ಕರೆಗಳಲ್ಲಿ ದಟ್ಟವಾದ ಕೇದಗೆಯ ಪೊದೆಗಳು ಬೆಳೆದು ನಿಂತಿರುತ್ತವೆ. ಅದನ್ನು ಎರಡು ಕೈಗಳಿಂದ ಪಕ್ಕಕ್ಕೆ ಸರಿಸಿ ದಾರಿ ಮಾಡಿ ನಾನು ನಡೆಯುತ್ತೇನೆ. ಒಂದು ಕಾಡು ಸೊಪ್ಪನ್ನು ಕಿತ್ತು ತೋಡಿಗೆ ಬಿಸಾಡಿದಾಗ ಮೀನುಗಳು ಅತ್ಯಾಸೆಯಿಂದ ಎದ್ದು ಬಂದು ಮುತ್ತಿಕೊಳ್ಳುತ್ತವೆ.

ಅದೆಷ್ಟು ಸ್ವಾರಸ್ಯಕರವಾಗಿತ್ತು ಎತ್ತಿನಬಂಡಿಯ ಪ್ರಯಾಣ ಮತ್ತು ಕೇದಗೆಯ ಪೊದೆಯನ್ನು ಸರಿಸಿ ತೋಡಿನ ದಂಡೆಯಲ್ಲಿ ನಡೆಯುವುದು! ಅಂತಹದ್ದೇ ಎತ್ತಿನ ಬಂಡಿಯ ಪ್ರಯಾಣದ ನಡುವೆ ನಾನೊಂದು ಅಚ್ಚರಿಯ ವೈಭವವನ್ನು ಕಂಡಿದ್ದೆ!

ಒಬ್ಬಳು ಹೆಣ್ಣುಮಗಳು ಎರಡು ಜಡೆಗಳನ್ನು ಹೆಣೆದು ಎರಡು ಕಡೆ ಹಾಕಿದ್ದಳು. ಗಲ್ಲದ ಗುಳಿಯಲ್ಲಿ ನಾಚಿಕೆಯನ್ನು ಬಚ್ಚಿಟ್ಟುಕೊಂಡಿದ್ದಳು. ಹದಿನಾಲ್ಕರ ಹರೆಯವಿರಬಹುದು. ಆತನಕ ಊರಿನಲ್ಲಿ ಕಾಣಸಿಗದ ಸುಂದರಿ. ಅವಳನ್ನು ಕಂಡಕೂಡಲೇ ಕುತೂಹಲ, ಗೊಂದಲಗಳು ಉಂಟಾದವು. ಅವಳು ಕಡೆಗಣ್ಣಿನಿಂದ ನನ್ನನ್ನು ನೋಡುತ್ತಿದ್ದಳು. ತುಟಿಯಂಚಿನಲ್ಲಿ ಒಂದು ಮುಗುಳ್ನಗೆಯನ್ನು ನನಗಾಗಿ ಬಚ್ಚಿಟ್ಟಿದ್ದಳು. ಪುಸ್ತಕಗಳ ಗಂಟಿನಿಂದ ತಕ್ಷಣ ಅವಳು ಎದೆಯನ್ನು ಮುಚ್ಚಿದಳು.

ಎದೆಯೊಳಗೆ ಚೆಂಡುಗಳನ್ನು ಬಚ್ಚಿಟ್ಟ ಮುನಿಕುಮಾರನನ್ನು ಕಂಡ ಋಷ್ಯಶೃಂಗನಂತಾದೆ ನಾನು. ನಾನು ಕಂಪಿಸಿದೆ. ಗಾಬರಿಗೊಂಡೆ. ನನಗೆ ತಿಳಿಯದೆ ಉಟ್ಟಬಟ್ಟೆ ಮಧ್ಯೆ ರಸ್ತೆಯಲ್ಲಿ ಹಾರಿಹೋದಂತೆ ತೋರಿತು. ಎಲ್ಲವೂ ಇದ್ದಕ್ಕಿದ್ದಂತೆ ನಡೆದುಹೋಯಿತು. ಕಿವಿಯಲ್ಲಿ ಚೈನಾ ಸಿಲ್ಕ್ ಇಲ್ಲದಿದ್ದರೂ ಎತ್ತುಗಳು ದುಷ್ಯಂತನ ರಥದ ಕುದುರೆಗಳಂತೆ ಓಡಿದವು. ನನ್ನ ದೃಷ್ಟಿಗೆ ಅವಳು ಸಣ್ಣದಾಗಿ ಸಣ್ಣದಾಗಿ ಕೊನೆಗೆ ತಿರುವಿನಾಚೆ ಮರೆಯಾದಳು. ತಿರುವಿನ ಹೊರಗಿನಿಂದ ಅವಳ ರೂಪ ದೊಡ್ಡದಾಗಿ ದೊಡ್ಡದಾಗಿ ನನ್ನ ಮನಸ್ಸಿನಲ್ಲಿ ತುಂಬಿ ನಿಂತಳು.

ನಾನು ಅದೃಷ್ಟವಂತ. ಏನೆಲ್ಲ ನನ್ನ ಸ್ವಂತವಾಗುತ್ತದೆ! ಪ್ರಶಾಂತ ಸುಂದರವಾದ ಈ ಊರು. ಮಳೆಬಿಲ್ಲಿನಿಂದ ಪ್ರಭಾವಲಯ ಸೃಷ್ಟಿಸಲ್ಪಟ್ಟ ಬೆಟ್ಟದ ಸಾಲುಗಳು. ವಿಶಾಲವಾದ ಗದ್ದೆ, ಬಯಲುಗಳು, ಅದರ ಮಧ್ಯೆ ಕೇದಗೆಯ ಕಾಡಿನ ನಡುವೆ ಜುಳು ಜುಳು ಹರಿಯುವ ಒಂದು ಪುಟ್ಟ ತೋಡು. ತೋಡಿಗೆ ಮರದ ಸಂಕ. ಅದರ ಮೇಲಿಂದ ಕಟ ಕಟ ಎಂದು ಸದ್ದು ಮಾಡುತ್ತಾ ಓಡುವ ಎತ್ತಿನ ಬಂಡಿಗಳು. ನಾಲ್ಕು ಮರಗಳ ವಾಸನೆಯ ಅಪ್ಪ, ತೆಂಗಿನಕಾಯಿ ಬೆಂದ ತೆಂಗಿನೆಣ್ಣೆಯ ವಾಸನೆಯುಳ್ಳ ತಲೆಗೂದಲಿನ ಅಮ್ಮ... ತುಂಟಾಟ ಆಡಲು, ಮುದ್ದಾಗಿ ಮಾತನಾಡಲು ಒಬ್ಬ ತಂಗಿ... ಈಗ ಇದೋ ಹೊಸತೊಂದು ಅನುಭೂತಿಯನ್ನು ನೀಡುತ್ತಾ ಎರಡು ಜಡೆಗಳ ನಗೆಗುಳಿಯನ್ನು ನಾಚಿಕೆಯನ್ನು ಬಚ್ಚಿಟ್ಟು ಹಸಿರು ರೇಷ್ಮೆ ಲಂಗ ತೊಟ್ಟ ಚೆಲುವೆ!

ಎಷ್ಟು ಸುಂದರವಾಗಿತ್ತು ನನ್ನ ಬಾಲ್ಯ.

ಆದರೆ ನಾನು ತ್ಯಜಿಸಬೇಕಾಯಿತು, ಎಲ್ಲವನ್ನು ಬಿಡಬೇಕಾಯಿತು!

ಮರುದಿನ ಹತ್ತಡಿ ಸಂಕದ ಬಳಿ ತುಂಬಾ ಹೊತ್ತು ಕಾಯುತ್ತಾ ನಿಂತೆ. ಪುಡಿಗಲ್ಲುಗಳನ್ನು ತೋಡಿಗೆಸೆದು ಮೀನುಗಳಿಗೆ ಆಸೆ ತೋರಿಸಿದೆ. ಆದರೆ ಮೀನುಗಳಿಗೂ ಬೇಸರ... ಅವು ಹಿಂತಿರುಗಿ ಹೋದವು. ಎಸೆದ ಪುಡಿಗಲ್ಲುಗಳಲ್ಲಿ ಕೆಲವು ತೇಲಿ ಹೋಗಲು ಹಿಂಜರಿದು ತಳಕ್ಕೆ ಸರಿದವು. ಇನ್ನೂ ಕೆಲವು ನೀರಿನ ಹರಿವಿಗೆ ಉರುಳಿರುಳಿ ಹೋದವು.

ಊರ ಹಾದಿಯಿಂದ ನಾನು ತೋಡಿನ ದಂಡೆಯಲ್ಲೆ ನಡೆದೆ. ಆಗ ಮಿಲಿಟರಿಯಿಂದ ರಜೆಯಲ್ಲಿ ಬಂದ ಕುಟ್ಟಿಯಪ್ಪ ನಂಬ್ಯಾರ್ ಕಾಣಿಸಿದರು. ಒಂದು ಕೈಯಿಂದ ಮೀಸೆಯನ್ನು ಹುರಿ ಮಾಡುತ್ತಾ ಮತ್ತೊಂದು ಕೈಯಲ್ಲಿ ಎರಡಡಿ ಉದ್ದದ ಟ್ರಾನ್ಸಿಸ್ಟರನ್ನು ಹಿಡಿದು ನಡೆದು ಬರುತ್ತಿದ್ದರು. ಇಲಂಗೈ ಒಲಿಬಿರುಪ್ಪ್ ಸಮೂಹ ಸ್ಥಾಪನೆಯ ಏಷ್ಯಾ ಸೇವೆಯಿಂದ ಸರೋಜಿನಿ ಶಿವಲಿಂಗಂ ನನಗೋಸ್ಕರ ಪ್ರಸಾರ ಮಾಡುತ್ತಿರುವ ಒಂದು ಗೀತೆ ಆಗ ರೇಡಿಯೋದಲ್ಲಿ ತೇಲಿ ಬರುತ್ತಿತ್ತು.

ಸ್ವರ್ಗಕ್ಕಿಂತಲೂ ಸುಂದರವೀ ಸ್ವಪ್ನಗಳರಳುವ ಈ ಗ್ರಾಮ ಪ್ರೇಮಮಯಿ ಪ್ರೀತಿಯ ಪ್ರೇಯಸಿ ವಾಸಿಸುತ್ತಿರುವ ನನ್ನ ಗ್ರಾಮ.

ನಂಬ್ಯಾರ್ ಮತ್ತು ರೇಡಿಯೋ ಗೀತೆ ದೂರವಾಗುವವರೆಗೂ ನಾನು ಅಲ್ಲೇ ನಿಂತೆ. ಸುತ್ತ ಮುತ್ತ ಯಾರೂ ಇಲ್ಲವೆಂದು ಖಚಿತಪಡಿಸಿಕೊಂಡು ನಾನೂ ನಟ ಪ್ರೇಂ ನಸೀರನಂತೆ ಕುಣಿಯುತ್ತಾ ಹಾಡನ್ನು ಗುನುಗುಣಿಸಿದೆ.

ಸ್ವರ್ಗಕ್ಕಿಂತಲೂ ಸುಂದರವೀ ಸ್ವಪ್ನಗಳರಳುವ ಈ ಗ್ರಾಮ ಪ್ರೇಮಮಯಿ ಪ್ರೀತಿಯ ಪ್ರೇಯಸಿ ವಾಸಿಸುತ್ತಿರುವ ನನ್ನ ಗ್ರಾಮ. ಆದರೆ ಆ ಗ್ರಾಮವನ್ನು ಒಮ್ಮೆಯೂ ಮಾತನಾಡಿಸದೆ, ನನ್ನ ಮೊದಲ ಪ್ರೇಯಸಿಯನ್ನು ನಾನು ಉಪೇಕ್ಷಿಸಬೇಕಾಯಿತು.

ಅಧ್ಯಾಯ 2

ಹತ್ತನೆಯ ತರಗತಿ ಮುಗಿಸಿದೆ. ಎರಡು ಜಡೆಗಳ ಹೆಣ್ಣುಮಗಳನ್ನು ಕಂಡು ಹೆಚ್ಚು ಕಾಲವಾಗಿರಲಿಲ್ಲ. ಅವಳೊಂದಿಗೆ ಮಾತನಾಡಲು, ಒಂದು ಪ್ರೇಮಪತ್ರ ಕೊಡಲು ಆಸೆಯಿದ್ದರೂ ಅದಕ್ಕೆ ಧೈರ್ಯವಿರಲಿಲ್ಲ.